

‘ಅಯೋಗ್ಯ ಅಮ್ಮನಿಗೆ ದ್ರೋಹ ಮಾಡ್ತೀಯಾ. ಉಂಡ ಮನೆಗೆ ಎರಡೆಣಿಸ್ತೀಯಾ. ಪಾಪಿ’ ಅಂದ. ನಾನು ಹೇಳಿದೆ ‘ನಾನು ಒಯ್ಯದಿದ್ದರೂ ಇದು ಅಮ್ಮನಿಗೆ ಸಿಕ್ಕಲಾರದು. ನಾನು ಒಯ್ದರೆ ತಪ್ಪಿಲ್ಲ. ಅಮ್ಮನಿಗೆ ಕೊಡು. ನಿನಗೆ ಬೇಡ’ ಒಳಗಿನವ ಕೂಗಿದ. ಆದರೆ ನನ್ನ ಸ್ವಾರ್ಥದ ಮುಂದೆ ಅವನು ಸೋತು ಕುಳಿತ. ಮೆಲ್ಲಗೆ ಸೀರೆಯಲ್ಲಾ ಹಾಗೆ ಇಟ್ಟು ಗಂಟನ್ನು ಕೊಟ್ಟಿಗೆಯಲ್ಲಿ ಬಚ್ಚಿಟ್ಟೆ. ಮನೆಗೆ ಬರುವಾಗ ಅದನ್ನು ತಂದೆ. ಭಯದಿಂದ ಕಾಲು ನಡುಗುತ್ತಿತ್ತು. ನಾನು ಮಾಡಿದ ತಪ್ಪನ್ನು ಮೀನಾಗೆ ಹೇಳಲು ಧೈರ್ಯ ಬರಲಿಲ್ಲ. ಮೀನಾಳನ್ನು ಆ ಮನೆಗೆ ಕಳಿಸಿ ಗಂಟನ್ನು ಇದೇ ಮಂಚದ ಕೆಳಗೆ ಹುಗಿದಿಟ್ಟೆ.

ನಾನು ಎಣಿಸಿದಂತೆ ಎರಡು ದಿನದಲ್ಲೇ ಲಿಲ್ಲಿ ನಾಪತ್ತೆಯಾಗಿದ್ದಳು. ತಂದೆಗೆ ಪತ್ರ ಬರೆದಿಟ್ಟು ಹೋಗಿದ್ದಳು. ಮೆಚ್ಚಿದವನೊಡನೆ ಬಾಳಲು ಹೋಗುತ್ತಿದ್ದೇನೆ. ಆಶೀರ್ವದಿಸಿ ಅಂತ ಬರೆದಿದ್ದಳು. ವೆಂಕಪ್ಪನವರು ಮೊದಲ ಬಾರಿ ಅತ್ತುಬಿಟ್ಟರು. ಅವರ ವೇದನೆ ಕರುಳು ಹಿಂಡುತ್ತಿತ್ತು. ಆಶ್ಚರ್ಯವೆಂದರೆ ಅಮ್ಮನ ಮೌನ. ಅಮ್ಮನಿಗೆ ಲಿಲ್ಲಿ ಹೋಗುವುದು ಗೊತ್ತಿತ್ತೆ ಅನಿಸುತ್ತಿತ್ತು?

ಅವಳು ಹೋಗಿ ನಾಲ್ಕು ದಿನವಾಗಿರಬಹುದು. ನನ್ನ ಮನೆಗೆ ಒಂದು ಪತ್ರ ಬಂತು. ನನಗೆ ಆಶ್ಚರ್ಯವಾಯಿತು. ನನಗೆ ನನ್ನ ಮನೆಗೆ ಬಂದದ್ದು ಇದೇ ಮೊದಲ ಪತ್ರ. ಅಡ್ರೆಸ್ ನೋಡಿದಾಗ ಅದು ಅಮ್ಮನಿಗೆ ಬಂದಿತ್ತು. ನಂಗೆ ಕುತೂಹಲ ತಡೆಯಲಾಗಲಿಲ್ಲ. ಒಡೆದು ಓದಿದೆ. ನನ್ನ ಮುಂದಿನ ಪ್ರಪಂಚ ತಿರುಗುತ್ತಿದ್ದಂತೆ ಭಾಸವಾಗುತ್ತಿತ್ತು. ಯಾರ ಕೈಲಿ ಓದು ಬರಹ ಕಲಿತಿದ್ದೇನೋ ಆ ನನ್ನ ಲಿಲ್ಲಿಯ ಅಂತಿಮ ಪತ್ರ ಅದಾಗಿತ್ತು. ಲಿಲ್ಲಿ ತಾಯಿಗೆ ಬರೆದಿದ್ದಳು. 'ಅಮ್ಮಾ ನಿನ್ನ ಆಶೀರ್ವಾದ ಹೊತ್ತು ರಾತ್ರೆ ಅಲ್ಲಿಂದ ಹೊರಟೆ. ನನಗಾಗಿ ಮಧು ಕಾರು ರೆಡಿಮಾಡಿ ಕಾಯುತ್ತಿದ್ದರು. ಇಬ್ಬರೂ ಅವರ ಊರಿಗೆ ಬಂದೆವು. ನಿಂಗೆ ಹೇಳಿದ್ದಂತೆ ಮಧು ಅಲ್ಲಿ ಒಂದು ನರ್ಸಿಂಗ್ ಹೋಮನ್ನು ಕೊಡುಕೊಳ್ಳಲು ಅಡ್ವಾನ್ಸ್ ಕೊಟ್ಟಿದ್ದರು. ಮನೆಯನ್ನೂ ನೋಡಿದ್ದರು. ನಾವು ಆ ಮನೆಗೆ ಹೋದೆವು. ನಾನು ಆ ರಾತ್ರಿ ಮಧುವೊಂದಿಗೆ ಕಳೆದೆ. ಅದೇ ಅವನೊಂದಿಗೆ ನನ್ನ ಮೊದಲ ಹಾಗೂ ಕೊನೆಯ ರಾತ್ರಿ.

ಬೆಳಿಗ್ಗೆ ನೀನು ಕೊಟ್ಟ ಚಿನ್ನವನ್ನು ಅವರಿಗೆ ಕೊಟ್ಟು ಸಾಲವೆಲ್ಲಾ ತೀರಿಸಲು ಹೇಳೋಣವೆಂದು ಬ್ಯಾಗ್ ಬಿಚ್ಚಿದೆ. ಅಮ್ಮಾ ಅಲ್ಲಿ ಆ ಚಿನ್ನ ಇರಲಿಲ್ಲ. ನಾನು ಭ್ರಾಂತಳಾದೆ. ಮಧೂಗೆ ಹೇಳಿದೆ. ಅವರೂ ಇನ್ನೊಮ್ಮೆ ನೋಡಿದರು. ಅಮ್ಮಾ ನಾನು ಮಧು ಬಿಟ್ಟರೆ ಅಲ್ಲಿಯಾರೂ ಇಲ್ಲ. ಹಾಗಾದರೆ ಹೇಗೆ ಹೋಗಲು ಸಾಧ್ಯ. ನೀನು ಕೊಟ್ಟಿದ್ದನ್ನು ನಾನೇ ಹಾಕಿಟ್ಟಿದ್ದೆ. ಅಲ್ಲಂತೂ ಹಾಗಾಗಲೂ ಸಾಧ್ಯವಿಲ್ಲ. ನಾನು ಗೋಳಾಡಿದೆ. ಮಧು ನಂಗೆ ಸಮಾಧಾನ ಮಾಡಬಂದರು. ನನಗೆ ಇದ್ದಕ್ಕಿದ್ದಂತೆ ವಿಷಯ ಹೊಳೆಯಿತು. ಹಣ ಕದ್ದಿದ್ದು ಯಾರೂ ಅಲ್ಲಮ್ಮಾ. ಯಾರನ್ನು ನಂಬಿ ನಿಮಗೆ ನೋವು ಕೊಟ್ಟು ಬಂದೆನೊ ಆ ನನ್ನ ಮಧುವಲ್ಲದೆ ಇನ್ಯಾರೂ ಈ ಕೆಲಸ ಮಾಡಲು ಸಾಧ್ಯವಿಲ್ಲ. ಕಾರಲ್ಲಿ ನನಗೆ ನಿದ್ದೆ ಬಂದಾಗ ಈ ಕೆಲಸ ನಡೆದಿದೆ. ಅಮ್ಮಾ ನಿಮಗೆ ಮಾಡಿದ ಮೋಸಕ್ಕೆ ಅಪ್ಪನನ್ನು ವಂಚಿಸಿದ್ದಕ್ಕೆ ನನಗೆ ಈ ಶಿಕ್ಷೆ. ಇಂತವರೊಡನೆ ಒಂದು ದಿನ ಕಳೆಯಲೂ ಮನ ಒಪ್ಪಲಿಲ್ಲ. ನಿಮ್ಮಲ್ಲಿಗೆ ಬರಲೂ ಆಗಲಿಲ್ಲ.

ಅಮ್ಮಾ ನಾನು ಮಧು ಹೊರಗೆ ಹೋಗುವುದನ್ನೇ ಕಾದು ನಿಂಗೆ ಸುಬ್ಬಣ್ಣನ ಹೆಸರಿಗೆ ಈ ಪತ್ರ ಬರೆದೆ. ಇದೆ ಮನೆಯ ತೊಲೆಗೆ ಒಂದು ಸೀರೆ ಕಟ್ಟಿದೆ. ನನ್ನ ಜೀವವನ್ನು ಈಗ ಮುಗಿಸುತ್ತೇನಮ್ಮ. ಅಪ್ಪನಿಗೆ, ನೆಚ್ಚಿನ ಸುಬ್ಬಣ್ಣನಿಗೆ ನನ್ನ ಅಂತಿಮ ಪ್ರಣಾಮ. ಅವನನ್ನೆ ಮಗನೆಂದು ಭಾವಿಸಿ. ಹೆತ್ತ ಮಗಳಿಗಿಂತ ಅವನೇ ಯೋಗ್ಯನಮ್ಮಾ. ನಿನ್ನ ಲಿಲ್ಲಿ'.‘ನಾನು 'ಲಿಲ್ಲಿ' ಎಂದು ಕೂಗಿ ಕೆಳಗೆ ಬಿದ್ದೆ.

ಮೀನಾ ಓಡಿ ಬಂದಳು. ಮೀನಾ ಬರುತ್ತಿದ್ದಂತೆ ಎಚ್ಚರಗೊಂಡೆ. ಕಾಗದವನ್ನು ಕಷ್ಟಪಟ್ಟು ಹರಿದು ಬಿಸಾಡಿದೆ. ಮೀನಾ ಎಷ್ಟೇ ಕೇಳಿದರೂ ಅಳುವಿಗೆ ಕಾರಣ ಹೇಳಲಿಲ್ಲ. ಅಮ್ಮನ ಮುಖ ನೋಡಲಾರದೆ ಅವರ ಮನೆಗೂ ಹೋಗದೆ ಎಂಟು ದಿನ ಮಲಗಿಯೇ ಕಳೆದೆ. ನನಗಾಗುವ ವೇದನೆ ಯಾರಲ್ಲೂ ಹೇಳಲಾರೆ. ನಾನು ಹುಗಿದಿಟ್ಟ ಜಾಗ ನೋಡಿದರೆ ಬೆಚ್ಚುತ್ತಿದೆ. ಹೆತ್ತ ಮಗಳಿಗಿಂತ ನಾನು ವಾಸಿ ಅಂದಿದ್ದಳು ಲಿಲ್ಲಿ. ಅಯ್ಯೋ ನನಗೆ ಈಗ ಏನೂ ಮಾಡಲೂ ಅಗತ್ತಿರಲಿಲ್ಲ. ಲಿಲ್ಲಿಯ ಮುಖ ಎದಿರು ನಿಂತು ‘ಸುಬ್ಬಣ್ಣಾ ಏನೋ ಮಾಡಿಬಿಟ್ಟೆ’ ಅಂದಂತೆ ಆಗುತ್ತಿತ್ತು. ಮುಂದಿನದೆಲ್ಲ ನನ್ನ ಪಾಪದ ಫಲವೇ.

ಅಮ್ಮನಿಗೆ ಆಗಲೆ ಲಿಲ್ಲಿ ಸತ್ತದ್ದು ತಿಳಿದಿತ್ತು. ಕಾರಣ ಗೊತ್ತಿದ್ದುದು ನನಗೆ ಮಾತ್ರ. ವೆಂಕಪ್ಪನವರನ್ನು ಲಿಲ್ಲಿಯ ಸಾವು ತುಂಬಾ ಹಣ್ಣು ಮಾಡಿತ್ತು. ನನ್ನ ಚಂದ್ರೂನ ಬಿಟ್ಟು ಯಾರೊಂದಿಗೂ ಅವರು ಮಾತೇ ಆಡುತ್ತಿರಲಿಲ್ಲ. ಅಮ್ಮ ಎಷ್ಟೋ ಸಾರಿ ಅತ್ತಿದ್ದರು. ‘ಇನ್ನೂ ನೀನೇ ಮಗ ಕಣೊ’ ಎನ್ನುತ್ತಿದ್ದರು. ಆ ಮಾತು ಕೇಳುವಾಗ ನಂಗೆ ಕಾದ ಸೀಸೆ ಕಿವಿಗೆ ಹುಯ್ದಂತಾಗುತ್ತಿತ್ತು. ನಾನು ಅವರ ಮನೆಯಲ್ಲಿ ಇದ್ದಾಗಲೇ ಒಂದಿನ ಚಂದ್ರು ಓಡಿ ಬಂದು ಅಮ್ಮ ಏನೋ ಒಂತರಾ ಮಾಡ್ತಾಳೆ ಅಂದ. ನಾನು ಓಡಿದೆ. ಹೋಗುವಾಗಲೇ ನನ್ನ ಮೀನಾ ನನ್ನ ಬಿಟ್ಟು ಹೋಗಿದ್ದಳು. ಅವಳಿಗೆ ಹೃದಯಾಘಾತವಾಗಿತ್ತು. ನಾನು ಅಳಲೇಯಿಲ್ಲ. ಏಕೆಂದರೆ ಅಳು ಪೂರಾ ಇಂಗಿ ಹೋಗಿತ್ತು. ಮೀನಾಳನ್ನು ಕಳೆದುಕೊಂಡ ಮೇಲೆ ನನ್ನಲ್ಲಿ ಶೂನ್ಯತೆ ವ್ಯಾಪಿಸಿತು.

ಚಂದ್ರು ಕಾಲೇಜಿಗೆ ಹೋಗುವವರೆಗೂ ಅವನ ಮೇಲ್ವಿಚಾರ ವೆಂಕಪ್ಪನವರದ್ದೆ. ನಾನು ಅವರ ಮನೆಗೆ ಹೋಗೋದೇ ನಿಲ್ಲಿಸಿದ್ದೆ. ಸುಮ್ಮನೆ ಕೂತಿರುತ್ತಿದ್ದೆ. ಚಂದ್ರು ವಿದ್ಯಾಭ್ಯಾಸ ಮುಗಿಯಿತು. ಅವನಿಗೂ ನನಗೂ ಮಾತೇ ಕಮ್ಮಿ. ವೆಂಕಪ್ಪನೆ ನನಗಿಂತ ಅವನನ್ನು ಅರಿತಿದ್ದರು. ಅವನು ಮೆಚ್ಚಿದ ಹುಡುಗಿ ಇಂದರಳೊಡನೆ ಅವನ ಮದುವೆ ನಡೆಯಿತು. ನಾನು ಎಲ್ಲಕ್ಕೂ ಮೂಕ ಪ್ರೇಕ್ಷಕನಾಗಿದ್ದೆ. ಎಲ್ಲರೂ ನನಗೆ ಸುಬ್ಬಣ್ಣ ಪಾಪ ಹೆಂಡ್ತಿ ಕಳಕೊಂಡು ಮಂಕಾಗಿದ್ದಾನೆ ಅನ್ನುತ್ತಿದ್ದರು. ಸೊಸೆ ಬಂದ ವರ್ಷದಲ್ಲೇ ಒಂದಿನ ಸ್ನಾನಕ್ಕೆ ಹೋದಾಗ ಅಲ್ಲೆ ಬಿದ್ದಿದ್ದೆ. ಎಚ್ಚರ ಬಂದಾಗ ಎಲ್ಲಾ ಅಳುತ್ತಿದ್ದರು. ನನಗೆ ಏನಾಗಿದೆ ಅಂತ ಗೊತ್ತಾಗಲೂ ಸ್ವಲ್ಪ ಹೊತ್ತು ಹಿಡಿಯಿತು. ನನಗೆ ಪಾರ್ಶ್ವವಾಯು ಬಡಿದಿತ್ತು. ಕೈಕಾಲು ಬಾಯಿ ಸ್ವಾಧೀನ ತಪ್ಪಿತ್ತು. ನನಗೆ ನೋವಾಗಲಿಲ್ಲ. ನನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಗಿತ್ತು.

ಈಗ ನನ್ನ ಕಂಡರೆ ಸೊಸೆಗೆ ಆಗುತ್ತಿರಲಿಲ್ಲ. ಅವಳಿಗೆ ಬೇಸರ ಬಂದಿತ್ತು. ಅದೂ ತಪ್ಪೆನಿಸಲಿಲ್ಲ. ಆದರೆ ದಿನ ಕಳೆಯಲು ಕಷ್ಟವಾಗುತ್ತಿತ್ತು. ಚಂದ್ರುಗೆ ಕೆಲಸ ಸಿಕ್ಕುವ ಹಾಗಿದೆ ಅಂತ ಹೆಂಡತಿಗೆ ಹೇಳಿದ್ದು ಕೇಳಿಸಿತು. ವೆಂಕಪ್ಪನೇ ಕೊಡಿಸಿದ್ದಂತೆ. ಚಂದ್ರೂ ನನ್ನ ಏನೂ ಮಾಡಬಹುದು. ನನಗೀಗ ಯೋಚನೆ ಯೆಂದರೆ ನಾನು ಹೂತಿಟ್ಟ ಪಾಪದ್ದೊಂದೆ. ಅದು ನನ್ನ ಮಂಚದ ಕೆಳಗೆಯಿತ್ತು. ಬೆಳಿಗ್ಗೆ ವೆಂಕಪ್ಪನ ಧ್ವನಿ ಕೇಳಿಸಿತು. ‘ಚಂದ್ರೂ’ ಅಂತಾನೇ ಬಂದ್ರು. ಚಂದ್ರು ಜೊತೆಗೆ ಅವರು ಆಡುವ ಮಾತು ಕೇಳಿಸಿತು. ವೆಂಕಪ್ಪ ಹೇಳುತ್ತಿದ್ದರು 'ನೋಡು ಚಂದ್ರೂ ನೀನೂ ಹೋಗ್ತೀಯಾ ನಂಗೆ ಊರಿನ ಋಣ ಸಾಕು. ಇದನ್ನೆಲ್ಲ ಸೇಲ್ ಮಾಡೋಣಾಂತ ಮಾಡಿದೀನಿ ಏನಂತಿ' ಅಂದ್ರು. ‘ನೀವು ಹಾಗೇ ಮಾಡಿ ತಾತ ಬೆಂಗಳೂರಲ್ಲಾದ್ರೆ ನಾನೂ ಇರ್ತೀನಿ’ ಅಂದ. ‘ನೋಡಪ್ಪ ಒಬ್ರಿಗೆ ಮಾತಾಡಿದೀನಿ ಅವರಿಗೆ ತೋಟದಲ್ಲೇ ಮನೆ ಕಟ್ಟಿಸಿಕೊಡುವ ಜವಾಬ್ದಾರಿ ನನ್ನದು. ಸದ್ಯಕ್ಕೆ ಸುಬ್ಬಣ್ಣನ ಕರಕೊಂಡು ನಮ್ಮನೇಗೆ ಬನ್ನಿ. ನಾಳೆಯಿಂದಲೇ ಈ ಮನೆ ಕೆಲಸ ಶುರು ಮಾಡಿಸೋಣ’ ಅಂದರು. ನನಗೆ ಭಯದಿಂದ ಮೈಕಂಪಿಸಿತು.

ಅಯ್ಯೋ ಏನಾಗಿ ಹೋಗುತ್ತೆ. ಮನೆ ವೆಂಕಪ್ಪನವರು ನಿಂತು ಕೀಳಿಸಿದರೆ ನಾನು ಹುಗಿದಿಟ್ಟ ಆ ಗಂಟು ಸಿಗುತ್ತೆ ಏನು ಮಾಡಲಿ. ಹೇಗೆ ಹೇಳಲಿ. ಇಲ್ಲ ಹೀಗಾಗಲು ಬಿಡಬಾರದು. ಚಂದ್ರುಗೆ ಹೇಳಲೇಬೇಕು. ಹೇಗೆ ಅಯ್ಯೋ ಸರ್ವನಾಶವಾಗುತ್ತೆ. ಬೆಳಗಾದರೆ ನನ್ನ ಪಾಪದ ಗಂಟು ಹೊರಬೀಳುತ್ತೆ. ಅಮ್ಮನ ದೃಷ್ಟಿಯಲ್ಲಿ, ವೆಂಕಪ್ಪನ ದೃಷ್ಟಿಯಲ್ಲಿ ಚಂದ್ರು ಕಣ್ಣಿಗೆ ನಾನೇನಾಗುತ್ತೇನೆ ಹಾಗಾಗಬಾರದು. ಅಪ್ಪರಲ್ಲೇ ಸಾಯಬೇಕು ಹೇಗೆ. ಅದೂ ಸಾಧ್ಯವಿಲ್ಲವಲ್ಲ. ಏನು ಮಾಡಲಿ ಏನು ಮಾಡಲಿ?